ದಿನಾಂಕಃ 23-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಕೆ.ವಿ ಪ್ರತಿವಾದಿ ಪರ ವಕೀಲರಿಂದಃ

ದಿನಾಂಕ 03.01.2007 ರಂದು ನನ್ನ ಅಣ್ಣ ಮಾಡಿಕೊಂಡರು ಎಂದು ಹೇಳುವ ಕರಾರು ಪತ್ರವನ್ನು ರದ್ದುಗೊಳಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಕರಾರು ಪತ್ರವನ್ನು ರಾಮಾಂಜಿನಪ್ಪರವರ ಸುಪರ್ದಿಗೆ ನೀಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರವನ್ನು ರಾಮಾಂಜಿನಪ್ಪರವರಿಗೆ ವಾಪಸ್ಸು ನೀಡಿದರು ಎಂದು ಹೇಳುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಸದರಿ ಕರಾರು ಪತ್ರದ ಮೂಲಕ ನನ್ನ ಅಣ್ಣನವರು ರಾಮಾಂಜಿನಪ್ಪರವರಿಗೆ ರೂ. 50,000/-ಗಳನ್ನು ನೀಡಿದ್ದರು ಎಂದರೆ ಸರಿ. ಸದರಿ ರೂ. 50,000/-ಗಳನ್ನು ರಾಮಾಂಜಿನಪ್ಪರವರು ವಾಪಸ್ಸು ನೀಡದೆ ನನ್ನ ಕರಾರು ಪತ್ರಕ್ಕೆ ಸೇರಿಸಿಕೊಂಡಿದ್ದಾರೆ. ಸದರಿ ರೂ. 50,000/-ಗಳನ್ನು ಸೇರಿಸಿಕೊಂಡಿರುವುದಾಗಿ ನಿಪಿ-1 ರಲ್ಲಿ ಬರೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ವಿಚಾರವನ್ನು ರಾಮಾಂಜಿನಪ್ಪರವರು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣನಿಗೆ ಕರಾರು ಪತ್ರವಾಗಿತ್ತು ಎಂಬ ವಿಚಾರವನ್ನು ನಿಪಿ-1 ರಲ್ಲಿ ನಮೂದಿಸಲು ನನಗೆ ತೊಂದರೆ ಇರಲಿಲ್ಲ. ನನ್ನ ಅಣ್ಣನಿಗೆ ಸಂಬಂಧಪಟ್ಟ ಕರಾರು ಪತ್ರವು ರದ್ದಾಗಿದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

ನಿಪಿ-1 ರ ಸಮಯದಲ್ಲಿ ಪ್ರತಿವಾದಿಗಳಿಗೆ ರೂ. 1,00,000/-ನೀಡಿದೆನು ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಹಣವನ್ನು ನಾನು ಅವರಿಗೆ ನಗದು ರೂಪದಲ್ಲಿ ನೀಡಿದೆನು ಎಂದು ನುಡಿಯುತ್ತಾರೆ. ನನ್ನ ಮನೆಯಲ್ಲಿದ್ದ ಸದರಿ ನಗದು ಹಣವನ್ನು ನಾನು ಪ್ರತಿವಾದಿಗಳಿಗೆ ನೀಡಲು ತಂದಿದ್ದೆನು. ನಿಪಿ-11 ರಿಂದ 13 ರ ದಾಖಲೆಗಳನ್ನು ಯಾವ ಉದ್ದೇಶಕ್ಕಾಗಿ ಹಾಜರುಪಡಿಸಿರುವಿರಿ? ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಬಳಿ ಹಣವಿರಲಿಲ್ಲವೆಂದು ನಿಪಿ-6 ರ ಪ್ರತ್ಯುತ್ತರ ತಿಳುವಳಿಕೆ ಪತ್ರದಲ್ಲಿ ಬರೆಸಿದ ಕಾರಣ ನನ್ನ ಬಳಿ ಹಣವಿತ್ತು ಎಂದು ತೋರಿಸಲು ನಿಪಿ-11 ರಿಂದ 13 ರ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ನೀಡಿರುವಿರಿ ಎಂದು ಹೇಳುವ ರೂ. 1,00,000/-ದ ಮೊತ್ತವನ್ನು ನಿಮ್ಮ ಆದಾಯ ತೆರಿಗೆಯಲ್ಲಿ ತೋರಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಅದನ್ನು ತೋರಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಐ.ಟಿ.ಆರ್(income tax returns) ರಲ್ಲಿ ನಿಪಿ-1 ರ ಕರಾರು ಪತ್ರವನ್ನು ತೋರಿಸಿರುವುದಿಲ್ಲ. 2010 ರಲ್ಲಿ ಕೃಷಿ

ಭೂಮಿಯನ್ನು ಖರೀದಿಸಲು ನಾನು ಅರ್ಹನಾಗಿದ್ದೆನೋ ಇಲ್ಲವೋ ಎಂಬುದನ್ನು ಈಗ ತಿಳಿದುಕೊಡಂಡಿದ್ದೇನೆ. 2010 ರಲ್ಲಿ ನಾನು ಮತ್ತು ನನ್ನ ಕುಟುಂಬದವರು ಯಾರೂ ರೈತರಾಗಿರಲಿಲ್ಲದ ಕಾರಣ ಮತ್ತು ನನ್ನ ವಾರ್ಷಿಕ ಆದಾಯ ರೂ. 2,00,000/-ಮೀರಿದ್ದ ಕಾರಣ ಕೃಷಿ ಭೂಮಿಯನ್ನು ಖರೀದಿಸಲು ಅರ್ಹನಾಗಿರಲಿಲ್ಲ ಎಂದರೆ ಸರಿಯಲ್ಲ. 2010 ರಲ್ಲಿ ಕೃಷಿ ಭೂಮಿಯನ್ನು ಖರೀದಿಸಲು ನಾನು ಅರ್ಹನಾಗಿಲ್ಲದ ಕಾರಣ ಕ್ರಯ ಪತ್ರವನ್ನು ಬರೆಸಿಕೊಳ್ಳಲು ನಾನು ಮುಂದಾಗಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಎಲ್ಲಾದಕ್ಕೂ ಸಿದ್ಧನಾಗಿದ್ದೆನು ಎಂದು ನುಡಿಯುತ್ತಾರೆ. 2010 ರಲ್ಲಿ ಕೃಷಿ ಭೂಮಿಯನ್ನು ಖರೀದಿಸಲು ಅರ್ಹನಿಲ್ಲದಿದ್ದರೂ ಕ್ರಯ ಪತ್ರ ಬರೆಸಿಕೊಳ್ಳಲು ತಯಾರಾಗಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿ ಹಾಗೂ ಆಕೆಯ ಕುಟುಂಬದವರು ಕೃಷಿಕರಾಗಿದ್ದರು ಹಾಗೂ 2010 ರಲ್ಲಿ ಕೃಷಿ ಭೂಮಿಗೆ ಸಂಬಂಧಪಟ್ಟ ಕಾನೂನಿನ ಅರಿವು ನನಗೆ ಇರಲಿಲ್ಲ ಎಂದು ನುಡಿಯುತ್ತಾರೆ. 2010 ರಲ್ಲಿ ನಾನು ಕ್ರಯ ಪತ್ರವನ್ನು ಬರೆಸಿಕೊಳ್ಳಲು ಹೋಗಿದ್ದಿದ್ದರೂ ನನ್ನ ಹೆಸರಿಗೆ ಕ್ರಯ ಪತ್ರ ನೋಂದಣಿಯಾಗುತ್ತಿರಲಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಯು ಕ್ರಯ ಪತ್ರವನ್ನು ಬರೆದುಕೊಡಲು ಮುಂದಾಗಲಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಕಾನೂನಾತ್ಮಕವಾಗಿ ಕ್ರಯ ಪತ್ರವು ನೋಂದಣಿಯಾಗುವುದಿಲ್ಲವೆಂಬ ಕಾರಣಕ್ಕಾಗಿಯೇ ಕ್ರಯ ಪತ್ರವನ್ನು ಬರೆಸಿಕೊಳ್ಳಲು ನಾನು ಮುಂದಾಗಲಿಲ್ಲ ಎಂದರೆ ಸರಿಯಲ್ಲ.

ಸಮಯದ ಅಭಾವ ಇರುವ ಕಾರಣ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು